College boys hostel in Gulbarga District.

651. SRI M. MALLIKARJUN KHARGE (Gurumitkal).—Whether the Hon'ble Social Welfare Minister can kindly reply for the following question ?

(a) the total amount released for the College Boys Hostels run by Private Managements in Gulbaga District (Talukwise information be furnished),

(b) whether there are any bills pending before the District Social Welfare Officer in respect of payment of extra boarding charges to private managements,

(c) if so, the action taken by the Government to disburse the amount to the private mangements ?

SRI G. BASAVANNAPPA (Minister for Social Welfare).—

(a) 8,03,900-00 for the year 1986-87 Talukawise statement is enclosed.

(b) Yes

(c) Action has been taken to pay the balance amount out of the funds provided to Zilla Parishads during 1987-88.

TALUKAWISE PRIVATE COLLEGE HOSTEL AND AMOUNT SANCTIONED

GULBARGA TALUK

Sl. No.	Name of the Hostel		Amount
1	Model College Boys Hostel, Gulbarga	...	26,830-00
2	Prakash College Boys Hostel, Gulbarga	...	60,560-00
3	National Banjara College Boys Hostel Gulbarga	...	58,375-00
4	Kashibai College Boys Hostel, Gulbarga	...	36,040-00
5	D. Devaraj Urs College Boys Hostel, Gulbarga	...	49,570-00
6	Banjara College Boys Hostel, Gulbarga	...	16,020-00
7	Rahul College Boys Hostel, Gulbarga	...	46,183-00
8	Matoshri Ramabai Boys Hostel, Gulbarga	...	495-00
9	Gnyan Jyothi College Boys Hostel, Gulbarga	...	29,690-00
10	Babasaheb Ambedkar College Boys Hostel, Gulbarga	...	59,735-00
11	Mahatma Gandhi College Boys Hostel, Gulbarga	...	48,177-00
12	Chandralambika College Boys Hostel, Gulbarga	...	1,540-00
13	L.V.V. Hostel, Gulbarga	...	30,080-00
14	Jagajeevan Ram College Hostel, Gulbarga	...	54,300-00
	YADGIR TALUK		
15	Goutam Budha College Hostel, Yadgir	...	30,720-00
16	Ashok College Hostel, Yadgir	...	19,200-00
	CHINCHOLI TALUK		
17	Divya Jyothi College Boys Hostel, Chincholi	...	42,550-00
	AFZALPUR TALUK		
18	Seva Banjara College Hostel, Afzalpur	...	8,255-00
	SHAHAPUR TALUK		
19	L.V.V. College Hostel, Shahapur	...	45,420-00
	SHORAPUR TALUK		
20	L.V.V. College Hostel, Shorapur	...	24,120-00
21	Babasaheb Ambedkar Hostel, Shorapur	...	15,640-00
		Grand Total Rs.	8,03,900-00

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಸುಮಾರು ೨೧ ಹಾಸ್ಟೆಲ್ ಲಿಸ್ಟ್ ಮಾತ್ರ ಕೊಟ್ಟಿದ್ದಾರೆ. ಆದರೆ ಕೆಲವು ಆಟ್ಯಾಚ್ಡ್ ಹಾಸ್ಟೆಲ್ ಲಿಸ್ಟ್ ಇದರಲ್ಲಿ ಕಾಣುವುದಿಲ್ಲ. ನೀವು ಎಕ್ಸ್ ಕ್ಲೂಸೀವ್‌ಲಿ ಪ್ರೈವೇಟ್ ಕಾಲೇಜ್ ಹಾಸ್ಟೆಲ್ಸ್ ಕೊಟ್ಟಹಾಗೆ ಕಾಣುತ್ತದೆ. ಕೆಲವು ಕಡೆ ಪ್ರೈವೇಟ್ ಕಾಲೇಜು ಹಾಸ್ಟೆಲ್ಸ್ ಆಟ್ಯಾಚ್ಡ್ ವಿಥ್ ಕಾಲೇಜ್ ಮ್ಯಾನೇಜ್‌ಮೆಂಟ್ ಏನಿವೆ ಅದರ ಲಿಸ್ಟ್ ಇಲ್ಲ. ಇದಕ್ಕಿಂತ ವಂಡಂಚೆ ನಾನು ತಮಗೆ ಒಂದು ಪತ್ರ ಬರೆದಿದ್ದೇನೆ. ಅಂಬೇಡ್ಕರ್ ಕಾಲೇಜ್ ಹಾಸ್ಟೆಲ್ ಆಳಂದ್ ಕಾಲೇಜ್ ಹಾಸ್ಟೆಲ್ ಇವೆಲ್ಲಾ ಕೂಡಾ ಇದರಲ್ಲಿ ಬರುತ್ತವೆ. ಇಲ್ಲಿ ಏನಾಗಿದೆ ಎಂದರೆ, ಒಂದು ಕಡೆ ತಾವು ಪ್ರೈವೇಟ್ ಕಾಲೇಜ್ ಮ್ಯಾನೇಜ್‌ಮೆಂಟ್‌ಗೆ ಒತ್ತಾಯ ಮಾಡಿ ಹಾಸ್ಟೆಲ್ ನಡೆಸಬೇಕೆಂದು ಹೇಳುತ್ತೀರಿ. ಇನ್ನೊಂದು ಕಡೆ ಅವರಿಗೆ ಸಮಂಜಸವಾಗಿ ಹಣ ಬಿಡುಗಡೆ ಮಾಡುವುದಿಲ್ಲ. ಹಣ ಬಂದರೂ ಕೂಡಾ ಎಲ್. ಓ. ಸಿ. ಬಂದಮೇಲೆ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸ್ ಕ್ಲರ್ಕ್ ಬಳಿ ಹೋಗಿ ಯಾರಾ ಪರ್ಸೆಂಟೇಜ್ ಎಂದರೆ ಹಣ ಕೊಡುತ್ತಾರೆ ಅವರಿಗೆ ಬಿಡುಗಡೆ ಮಾಡುತ್ತಾರೆ. ಜಿನೈನ್ ಮ್ಯಾನೇಜ್‌ಮೆಂಟ್ ಯಾರಾದರೂ ಹೋಗಿ ರಿಕ್ವೆಸ್ಟ್ ಮಾಡಿದರೆ, ಆ ಪ್ರಿನ್ಸಿಪಾಲರುಗಳಿಗೆ ಅಲ್ಲಿ ಏನೂ ಬೆಲೆ ಇಲ್ಲ. ತಮಗೆ ಯಾರು ಬೇಕು ಅವರನ್ನು ಕರೆಸಿಕೊಂಡು ಹಣ ರಿಲೀಸ್ ಮಾಡ ತಕ್ಕಂಥ ಪದ್ಧತಿ ಇದೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ತಾವು ಯಾವ ಆಕ್ಷನ್ ತೆಗೆದುಕೊಂಡಿಲ್ಲ.

ಎರಡನೆಯದಾಗಿ, ಕಾಲೇಜ್ ಬೋರ್ಡರ್ಸ್‌ಗೆ ನೀವು ೧೫೦ ರೂಪಾಯಿ ಮಾತ್ರ ಕೊಡುತ್ತಿದ್ದೀರಿ. ಆಫೀಸರ್ಸ್ ಸಂಬಳ ಜಾಸ್ತಿಯಾಯಿತು, ಲೆಜಿಸ್ಲೇಟರ್ಸ್ ಸಂಬಳ ಜಾಸ್ತಿಯಾಯಿತು, ಮಿನಿಸ್ಟರ್ಸ್ ಸಂಬಳ ಜಾಸ್ತಿಯಾಯಿತು. ಆದರೆ ಈ ಹುಡುಗರಿಗೆ ಸುಮಾರು ಐದಾರು ವರ್ಷಗಳ ಹಿಂದೆ ಎನ್‌ಹ್ಯಾನ್ಸ್ ಮಾಡಿದ್ದು ಇವತ್ತಿನವರೆಗೂ ೧೫೦ ರೂಪಾಯಿ ಕೊಡಲಾಗುತ್ತಿದೆ. ಇದರಿಂದ ಅನೇಕ ಮಕ್ಕಳಿಗೆ ತೊಂದರೆಯಾಗಿದೆ. ಬಹಳಷ್ಟು ಜನ ಮ್ಯಾನೇಜ್‌ಮೆಂಟ್‌ನವರು ಇವತ್ತಿನದಿವಸ ಸರಿಯಾಗಿ ಊಟ ಹಾಕಾವುದಿಲ್ಲ. ಇದರಿಂದ ಮಕ್ಕಳಿಗೂ ಕೂಡ ಸಫಿಷಿಯಂಟ್ ಆಗಿ ಹೊಟ್ಟೆ ತಂಬುಬತಕ್ಕ ವ್ಯವಸ್ಥೆ ಇಲ್ಲ. ಈಗೇನು ಪ್ರೈಸ್‌ರೈಸ್ ಆಗಿದೆ. ಆ ಇಂಡೆಕ್ಸ್ ಪ್ರಕಾರ, ಲೆಕ್ಕ ತೆಗೆದುಕೊಂಡು, ಆವರಿಗೆ ಸುಮಾರು ೨೫೦ ರೂಪಾಯಿ ಪರ್ ಹೆಡ್‌ನಂತೆ ಹೆಚ್ಚಿಸತಕ್ಕಂಥಾದ್ದನ್ನು ಮಾಡುತ್ತೀರಾ, ಹೇಗೆ ? ಇವರೆಡೂ ಪ್ರಶ್ನೆಗೆ ಉತ್ತರ ಕೊಡಬೇಕು.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೇ, ಖಾಸಗಿ ವಿದ್ಯಾರ್ಥಿ ನಿಲಯಗಳ ಪಟ್ಟಿ ಕೊಡಲಾಗಿದೆ. ಕಾಲೇಜಿಗೆ ಸೇರಿದ ವಿದ್ಯಾರ್ಥಿನಿಲಯಗಳ ಪಟ್ಟಿಯನ್ನು ಕೊಟ್ಟಿಲ್ಲ ಎಂದು ಹೇಳಿದರು. ಆ ಪಟ್ಟಿ ಇದೆ ಅದನ್ನು ಕೊಡುತ್ತೇನೆ. ಒಟ್ಟು ೧೪೪ ಕಾಲೇಜು ವಿದ್ಯಾರ್ಥಿನಿಲಯಗಳು ಇವೆ. ಇವುಗಳನ್ನು ಪ್ರಾಂಶುಪಾಲರೇ ನಡೆಸುತ್ತಿದ್ದಾರೆ. ಯಾದಗಿರಿ ಮತ್ತು ಆಳಂದ್‌ನಲ್ಲಿರುವ ಕಾಲೇಜು ವಿದ್ಯಾರ್ಥಿನಿಲಯಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಡೆಸುತ್ತಿದ್ದಾರೆ. ಬಿಲ್ ಕೊಡುವುದರಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದನ್ನ ನನ್ನ ಗಮನಕ್ಕೆ ತಂದಿದ್ದಾರೆ ನಾನು ತಕ್ಷಣ ನಮ್ಮ ಜಾಯಿಂಟ್ ಡೈರೆಕ್ಟರ್ ಶ್ರೀ ಪಾಪಣ್ಣರೆಡ್ಡಿಯವರನ್ನು ಕರೆಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಸಂಬಂಧಪಟ್ಟ ಅಧಿಕಾರಿಯವರನ್ನು ಅಮಾನತ್ತಿನಲ್ಲಿಡುವುದಕ್ಕೆ ಹೇಳಿದ್ದೆ. ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ, ಅವರನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಂ ಪನಿಷ್ ದೆಮ್, ನಾಲ್ಕು ಜನಕ್ಕೆ ಪನಿಷ್ ಮಾಡಿದರೆ ಬುದ್ಧಿ ಬರುತ್ತದೆ

ಶ್ರೀ ಜಿ. ಬಸವಣ್ಣೆಪ್ಪ.—ಆಮೇಲೆ ಬೋರ್ಡರ್ಸ್ ಹಣ ಜಾಸ್ತಿ ಮಾಡುವುದಕ್ಕೆ ಅಂದರೆ ೧೫೦ ರೂಪಾಯಿಗಳಿಂದ ೨೫೦ ಮಾಡುವುದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಮೂವ್ ಮಾಡಿದ್ದೇವೆ. ಅದು ಫೈನಲ್ ಸ್ಟೇಜ್‌ನಲ್ಲಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದನ್ನು ನಾನು ಏತಕ್ಕೆ ಕೇಳುತ್ತಿದ್ದೇನೆ ಎಂದರೆ ಬೀದರ್‌ನಲ್ಲಿ ತಮಗೆ ಗೊತ್ತಿರುವ ಹಾಗೆ ಇದೇ ರೀತಿಯ ಅವ್ಯವಹಾರ ಆಗಿ ಅಲ್ಲಿ ಚೆಕ್ ಸಿಸ್ಟಮ್ ತಾವು ಮಾಡಿದ್ದೀರಿ. ಇದರಿಂದ ಹಣ ನೇರವಾಗಿ ಮಕ್ಕಳಿಗೆ ಮಂಟ್ಟತಕ್ಕಂಥ ವ್ಯವಸ್ಥೆ ಆಯಿತು. ಆದರೆ ಅವರಿಗೆ ಮನೆಗಳು ಎಲ್ಲಿ ಸಿಗುತ್ತವೆ? ಒಂದು ಹಾಸ್ಟೆಲ್ ಇದ್ದರೆ ಅಲ್ಲಿಗೆ ಅವನು ಜಂಲೈ ತಿಂಗಳಲ್ಲಿ ಹೋಗಿ, ತನ್ನ ಪೆಟ್ಟಿಗೆಯನ್ನು ಇಟ್ಟುಕೊಂಡು, ತಾನು ಯಾವ ಕಾಲೇಜಿಗೆ ಹೋಗಬೇಕು ಅದಕ್ಕೆ ಅಪ್ಲಿ

ಕೇಷನ್ ಫೈಲ್ ಮಾಡುತ್ತಾನೆ. ಯಾವುದೂ ಹಾಸ್ಪೆಲ್ ಇರಲಿಲ್ಲ, ಪ್ರೈವೇಟ್ ಆಗಲೀ, ಗೌರ್ನಮೆಂಟ್ ಆಗಲೀ ವ್ಯವಸ್ಥೆ ಮಾಡಲಿಲ್ಲ ಎಂದರೆ ಅವನು ಬರೀ ಚೆಕ್ ತೆಗೆದುಕೊಂಡು ಏನು ಮಾಡುತ್ತಾನೆ ? ತಿಂಗಳ ಕೊನೆಯಲ್ಲಿ ಚೆಕ್ ಬಂದಾಗ ಐದು ಆರು ದಿನದಲ್ಲಿ ಖರ್ಚು ಮಾಡಿಕೊಂಡು ಉಪವಾಸ ಬಿದ್ದು, ಮತ್ತೆ ತನ್ನ ಊರಿಗೆ ಹೋಗತಕ್ಕಂಥ ಪರಿಸ್ಥಿತಿ ಆಗುತ್ತದೆ. ೨೫೦ ರೂಪಾಯಿ ಹಣ ಅಲ್ಲಿಂದ ಬಿಡುಗಡೆ ಯಾಗುವವರೆಗೆ ನೀವೇ ಅಡ್‌ಹಾಕ್ ಬೇಸಿಸ್ ಮೇಲೆ ಪರ್ ಹೆಡ್ ೨೫೦ ರೂಪಾಯಿನಂತೆ ರಿಲೀಸ್ ಮಾಡಿ. ಎಲ್ಲೆಲ್ಲಿ ಕಾಲೇಜು ಬಾಯ್ಸ್ ಹಾಸ್ಟೆಲ್‌ಗಳು ಇಲ್ಲವೋ, ಅಲ್ಲಿ ಸರ್ಕಾರವೇ ಏತಕ್ಕೆ ವ್ಯವಸ್ಥೆ ಮಾಡಬಾರದು ?

ಶ್ರೀ ಜಿ. ಬಸವಣ್ಣೆಪ್ಪ.—ಈ ಬಗ್ಗೆ ಬೀದರ್‌ನ ವಿದ್ಯಾರ್ಥಿಗಳು ನನ್ನನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿ ಹೋಗಿದ್ದಾರೆ. ಸರ್ಕಾರವೇ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಮಂಗಳೂರು ಭೂ ನ್ಯಾಯ ಮಂಡಲಿಗೆ ವಾಹನವನ್ನೊದಗಿಸುವುದು.

೨೬೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಹಾಗೂ ಯೋಜನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ಮಂಗಳೂರು ಭೂನ್ಯಾಯ ಮಂಡಳಿಯಲ್ಲಿ ಸ್ಥಳ ತನಿಖೆಗೆ ಹೆಚ್ಚಿನ ಪ್ರಕರಣಗಳು ಇರುವುದರಿಂದ ಈ ನ್ಯಾಯ ಮಂಡಳಿಗೆ ವಾಹನವನ್ನು ಒದಗಿಸಲಾಗಿದೆಯೆ ?

ಆ) ಸ್ಥಳ ತನಿಖೆಗೆ ವಾಹನದ ಅತ್ಯಗತ್ಯ ಇರುವುದರಿಂದ ಸ್ವಂತ ಜೀಪನ್ನು ಒದಗಿಸಲಾಗುವುದೇ ಅಥವಾ ವಾರಕ್ಕೆ ಎರಡು ಭಾರಿ ಇನ್ನಿತರ ಇಲಾಖೆಯ ವಾಹನ ಸಿಗುವಂತೆ ಕಡ್ಡಾಯವಾಗಿ ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಇಲ್ಲ.

ಆ) ಪ್ರತ್ಯೇಕ ವಾಹನವನ್ನು ಒದಗಿಸಿಲ್ಲ. ಅವಶ್ಯ ಕಂಡಂ ಬಂದರೆ, ಪರಿಶೀಲಿಸಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಬಗ್ಗೆ ಖುದ್ದಾಗಿ ನನ್ನಲ್ಲಿ ಬಂದು ಮಾತನಾಡಿದ್ದಾರೆ. ಈ ಬಗ್ಗೆ ನಾನು ವಾರದಲ್ಲಿ ಎರಡು ಸಲವಾದರೂ ವಾಹನವನ್ನು ಮಂಗಳೂರು ಟ್ರಿಬ್ಯುನಲ್‌ಗೆ ಒದಗಿಸಿಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ಬಗ್ಗೆ ಅಧಿಕಾರಿಗಳು ಈಗಾಗಲೇ ಕ್ರಮ ತೆಗೆದುಕೊಂಡಿರಬಹುದು. ಕ್ರಮ ತೆಗೆದುಕೊಂಡಿಲ್ಲದಿದ್ದರೆ ನಾನು ಆದೇಶ ನೀಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದಿಂದ ನನಗೆ ಸಂತೋಷವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿಯೇ ಹೆಚ್ಚು ಕೇಸುಗಳು ಬಾಕಿ ಇವೆ. ಅಲ್ಲಿ ಸುಮಾರು ೪ ಸಾವಿರ ಕೇಸ್‌ಗಳು ಪೆಂಡಿಂಗ್ ಇರಬಹುದು. ಒಂದು ತಿಂಗಳಲ್ಲಿ ೪೦–೫೦ ಕೇಸ್‌ಗಳನ್ನು ತೀರ್ಮಾನ ಮಾಡಬಹುದು, ಆದರೂ ಬಾಕಿ ಇವೆ. ಇದಕ್ಕೆಲ್ಲಾ ಕಾರಣ ವಾಹನ ವಿಲ್ಲದೆ ಸ್ಥಳ ಪರಿಶೀಲನೆಯಾಗದೆ ಇರುವುದೇ ಮೂಲ ಕಾರಣ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ರಾಜ್ಯದ ಅನೇಕ ಭೂ ನ್ಯಾಯ ಮಂಡಲಿಗಳು ಜಮೀನನ್ನು ಸರ್ವೆ ಮಾಡದೆ ತೀರ್ಪು ಕೊಟ್ಟಿರತಕ್ಕ ಅನೇಕ ಪ್ರಕರಣಗಳು ಇವೆ. ಇವುಗಳನ್ನು ಮರು ವಿಚಾರಣೆ ಮಾಡುವುದಕ್ಕೆ ಭೂ ನ್ಯಾಯ ಮಂಡಲಿಗಳಿಗೆ ಹಕ್ಕು ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಕಾನೂನು ಅಭಿಪ್ರಾಯವನ್ನು ತೆಗೆದುಕೊಂಡು ಉತ್ತರ ಹೇಳುತ್ತೇನೆ.